ಶ್ರೀ ಕಡಿದಾಳ್ ಮಂಜಪ್ಪ.—ನಂಬಂಧಪಟ್ಟ ದರ ಖಾಸ್ತುದಾರರು ಅರ್ಜಿಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

Money collected on Sugarcane supplied to Mandya Factory.

Q.—602. **Sri G. S. BOMME GOWDA** (Mandya).—

Will the Government be pleased to state :—

(*a*) the amount that has been collected till now at six rupees per ton on the sugarcane supplied to Mandya Sugar Factory ;

(*b*) the amount spent till now, out of the money so collected, on improvements, on communication facilities and other development works ;

(*c*) whether request has not come from the committee appointed for this purpose stating that the amount that is being given at present is not adequate and more should be allotted ?

A.—**Sri Kadidal MANJAPPA** (Minister for Revenue and Public Works).—

(*a*) Rs. 85,01,088 to end of January 1955.

(*b*) Rs. 65,48,575 to end of January 1955.

(*c*) Yes, from the Development Standing Committee.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ವಸೂಲಾಗಿದೆಯೆಂದು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—1952-53ನೆಯ ಇಸವಿಯಿಂದ ಲೆಕ್ಕ ಇದೆ. 1952-53ರಲ್ಲಿ 26 ಲಕ್ಷ ಚಿಲ್ಲರೆ, 1953-54ರಲ್ಲಿ 21 ಲಕ್ಷ ಚಿಲ್ಲರೆ, 1954-55ರಲ್ಲಿ 30 ಲಕ್ಷ ಚಿಲ್ಲರೆ ಹಣ ವಸೂಲಾಗಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಪ್ರತಿವರ್ಷವೂ ಎಷ್ಟು ಸೆಸ್ ಬರಬೇಕೋ ಅಷ್ಟು ಸೆಸ್ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿರಬಹುದೆಂದು ಊಹೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಎಷ್ಟು ಟನ್ ಕಬ್ಬು ಪ್ರತಿವರ್ಷವೂ ಸಕ್ಕರೆ ಕಾರ್ಖಾನೆಯಲ್ಲಿ crush ಆಗಿದೆಯೆಂಬುದನ್ನು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಪ್ರತಿವರ್ಷವೂ ಕಬ್ಬು ಬೆಳೆಯುವ ಪ್ರದೇಶದಲ್ಲಿ ಸಂಚಾರ ಸೌಕರ್ಯ, ಗ್ರಾಮಾಭಿವೃದ್ಧಿ, ಆರೋಗ್ಯ ಮುಂತಾದುವುಗಳಿಗೆ ಪ್ರತಿಯೊಂದಕ್ಕೂ ಎಷ್ಟೆಷ್ಟು ಖರ್ಚು ಮಾಡಿದ್ದೀರೆಂಬುದನ್ನಾದರೂ ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಕೊಡುವುದಕ್ಕಾಗುವುದಿಲ್ಲ. ಆಮೇಲೆ ಬೇಕಾದರೆ ಕೊಡುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಸಂಚಾರ ಸೌಕರ್ಯ ಏನಾ ಏಿಕ್ಕ ಭಾಗಗಳಿಗೆ ಖರ್ಚುಮಾಡದಿರುವುದನ್ನು ಪರಿಶೀಲಿಸಿ ಮುಂದಿನ ಬಾಬಿಗೆ ಎಷ್ಟೆಷ್ಟು ಖರ್ಚುಮಾಡಬೇಕೆಂಬ ಬಗ್ಗೆ ಅಂದಾಜು ತರಿಸಿ ಅದರಂತೆ ಖರ್ಚು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೊಂದು ಡೆವಲಪ್‌ಮೆಂಟ್ ಕಮಿಟಿ ಇದೆ. ಅದಕ್ಕೆ ಬೇಕಾದಷ್ಟು ಹಣವನ್ನು ಸರ್ಕಾರದವರು ಖರ್ಚುಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಡೆವಲಪ್‌ಮೆಂಟ್ ಕಮಿಟಿಯವರು ತಕ್ಕ ಯೋಜನೆ ತಯಾರುಮಾಡಿ ಸರ್ಕಾರದವರಿಗೆ ಕಳುಹಿಸಿಕೊಟ್ಟರೆ ಇರತಕ್ಕ ಹಣವನ್ನು ಖರ್ಚುಮಾಡುವುದಕ್ಕೆ ಅಡ್ಡಿಯಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮೊದಲು ಸೆಸ್ collect ಮಾಡಬೇಕಾದರೆ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕೆಂದು ಹೇಳಿ ಮಾಡಿದ್ದರೋ ಅದರಂತೆ ಸಂಚಾರ ಸೌಕರ್ಯ ಏನಾ ಬಾಕಿಯವನ್ನು ಮಾಡದೆ ಇದ್ದರೆ ಅವನ್ನೂ ಮಾಡಿಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಉದ್ದೇಶಕ್ಕಾಗಿ Sugarcane Cess ಫಂಡನ್ನು ಮಾಡಿದೆಯೋ ಆ ಉದ್ದೇಶಕ್ಕಾಗಿ ಖರ್ಚುಮಾಡುವುದರಲ್ಲಿ ತೊಂದರೆಯಿಲ್ಲ.

Sri S. SRINIVASA IYENGAR.—By whom is this cess collected, Sir ?

Sri Kadidal MANJAPPA.—By the factory.

Sri S. SRINIVASA IYENGAR.—From whom, Sir ?

Sri Kadidal MANJAPPA.—The factory pays it.

Sri S. SRINIVASA IYENGAR.—When the factory pays the cess, where has it to be spent, Sir ?

Sri Kadidal MANJAPPA.—It has to be spent in the area where the sugarcane is grown. The area has been limited.

Sri S. SRINIVASA IYENGAR.—What is the area where the sugarcane is grown ?

Sri Kadidal MANJAPPA.—The area has been fixed according to the Government Order passed some years ago.

Sri S. SRINIVASA IYENGAR.—May I know whether the area the Government meant is the area under the Visvesvaraya Canal, Sir ?

Sri Kadidal MANJAPPA.—Yes.

Sri S. SRINIVASA IYENGAR.—Has it come to the notice of Government that this amount is not spent in the entire area ?

Sri Kadidal MANJAPPA.—The area is limited, as I submitted already.

Sri S. SRINIVASA IYENGAR.—Will the Government consider now at least to expand that area so that the entire tract may by benefited ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡಬಹುದೇ ಹೊರತು, ನಿರ್ಧಾರವಾಗಿ ಏನನ್ನೂ ಹೇಳಲಾರೆ. ಟಿ.-ನರಸೀಪುರ ಮತ್ತು ನಂಜನಗೂಡಿನಲ್ಲಿ ಖರ್ಚುಮಾಡುವುದಕ್ಕೆ ಕಷ್ಟವಾಗಬಹುದು.

Sri S. SRINIVASA IYENGAR.—Well Sir, may I place before the Government that I made references to the tract under the Visvesvaraya Canal. I never meant Nanjangud or anything. May I know the purpose for which the cess is being collected from the factory?

Sri Kadidal MANJAPPA.—It is collected for the development of the area mentioned in the Government Order.

Sri S. SRINIVASA IYENGAR.—Will the Government, in the light of the answer furnished now, consider the question of backwardness of the area and pass an amended order ?

Sri Kadidal MANJAPPA.—The matter will be examined.

ಶ್ರೀ ಬಿ. ಹುಚ್ಚೇಗೌಡ.—ಈ ಹಣ ಯಾವ ಲೆಕ್ಕಕ್ಕೆ ಜಮಾ ಆಗುತ್ತಿದೆ ?

Sri Kadidal MANJAPPA.—Sugarcane Cess Fund ಗೆ.

ಶ್ರೀ ಬಿ. ಹುಚ್ಚೇಗೌಡ.—ಹಣದ ವಸೂಲಿಗೇನಾದರೂ ಖರ್ಚು ತೆಗೆದುಕೊಳ್ಳುತ್ತಿದ್ದೀರೋ ?

Sri Kadidal MANJAPPA.—I do not remember, Sir.

ಶ್ರೀ ಬಿ. ಹುಚ್ಚೇಗೌಡ.—ಇದರ ಆಡಳಿತವನ್ನು ಯಾರು ನಡೆಸುತ್ತಾರೆ ? Who operates on the account ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಖರ್ಚಾದಹಾಗೆಲ್ಲಾ ಹಣ ಒದಗಿಸುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಖರ್ಚು ಮಾಡುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೊಂದು Development Committee ಇದೆ. ಅವರ ಸಲಹೆಯನ್ನು ಪಡೆದು ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳು ಖರ್ಚು ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಈಗ ಇದರ ಅಧ್ಯಕ್ಷರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಕೆ. ಎ. ಶಂಕರ ಗೌಡರು.

ಶ್ರೀ ಬಿ. ಹುಚ್ಚೇಗೌಡ.—ಈ ಹಣ ಯಾವ ಯಾವ ಬಾಬಿಗೆ ಖರ್ಚಾಗುತ್ತಿದೆಯೆಂಬುದನ್ನು ಹೇಳುತ್ತೀರಾ ? ಬರೀ ರಸ್ತೆಗೆ ಎಷ್ಟು ಖರ್ಚಾಗುತ್ತಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವಯಾವ ಬಾಬಿಗೆ ಖರ್ಚು ಮಾಡಬೇಕೆಂಬುದು ಮೊದಲೇ ನಿರ್ಧಾರವಾಗಿದೆ. ಆ ಬಗ್ಗೆ ಒಂದು ಸರ್ಕಾರಿ ಹುಕ್ಕುಂ ಇದೆ. ಮುಖ್ಯವಾಗಿ ಸಂಬಂಧಪಟ್ಟ ಸ್ಥಳಗಳ ಅಭಿವೃದ್ಧಿಗಾಗಿ ಖರ್ಚುಮಾಡಲಾಗಿದೆ.

ಶ್ರೀ ಬಿ. ವೈ. ನೀಲೇಗೌಡ.—ಸಂಸ್ಥಾನದಲ್ಲಿ ಕಬ್ಬು ಬೆಳೆಯುವ ಕಡೆಯಲ್ಲೆಲ್ಲಾ ಈ ಸೆಸ್ಸನ್ನು ಹಾಕಿದ್ದೀರಾ ಅಥವಾ ಸಕ್ಕರೆ ಕಂಪೆನಿಗೆ ಸಪ್ಲೈ ಆಗುವ ಕಬ್ಬಿಗೆ ಮಾತ್ರ ಹಾಕಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಕ್ಕರೆ ಕಂಪೆನಿಗೆ ಸಪ್ಲೈ ಮಾಡುವ ಕಬ್ಬಿಗೆ ಮಾತ್ರ.

Sri B. Y. NEELE GOWDA.—Is it not a special measure of taxation under a particular class of cane supplied to the factory ?

Sri Kadidal MANJAPPA.—It is a special cess.

Sri K. HANUMANTHAIYA.—It is under the consideration. In respect of the block system of water supply, these cane growers are getting supply of water all the year round. They are therefore enjoying at the expense of others. Justice and equity demands that we should reconsider the question, Sir.

Sri B. Y. NEELE GOWDA.—Is it not a special Act for the benefit of the area and for the development of that area, Sir ?

Sri Kadidal MANJAPPA.—It is a cess.

Sri B. Y. NEELE GOWDA.—What is meant by 'cess,' Sir ?

Mr. SPEAKER.—That is prescribed in the Act.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಕಬ್ಬನ್ನು ಬೆಳೆಯತಕ್ಕವರೇನಾದರೂ ಜಾಸ್ತಿ ವಾಟರ್‌ರೇಟನ್ನು ಕೊಡುತ್ತಾರೆಯೇ ?

Sri Kadidal MANJAPPA.—Water rates vary from place to place in the Mysore State.

Sri B. P. NAGARAJA MURTHY.—I mean in the Visvesvaraya Canal Area.

Sri Kadidal MANJAPPA.—I think the rates are uniform.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಆದುದರಿಂದ ನಾಲ್ಕುತಿಂಗಳವರೆಗೂ ಈ ಭತ್ತ ಮತ್ತು ಕಬ್ಬಿನ ಬೆಳೆಗಳಿಂದ ಬರತಕ್ಕಂಥ ವಾಟರ್ ರೇಟ್ ಆದಾಯವನ್ನು ಎಲ್ಲರಿಗೂ ಒಂದೇ ಸಮನಾಗಿ ಹಂಚುವುದು ಸೂಕ್ತವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ದಿವಸ ಈ ಕಬ್ಬಿನ ಬೆಳೆಗೆ ಹೆಚ್ಚು ನೀರನ್ನು ಉಪಯೋಗಿಸುತ್ತಿರುವುದರಿಂದ ಕೊನೆಯ ನರಹದ್ದಿನಲ್ಲರತಕ್ಕಂಥ ರೈತರಿಗೆ ಭತ್ತದ ವ್ಯವಸಾಯಕ್ಕೆ ನೀರಿನ ತೊಂದರೆ ಬಹಳವಾಗಿ ರತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ತೊಂದರೆಯಾಗುತ್ತದೆ ಅನ್ನತಕ್ಕಂಥ ವಿಚಾರ ನನಗೆ ನಿನ್ನೆತಾನೆ ನಡೆದ ಚರ್ಚೆಯಿಂದ ಗೊತ್ತಾಯಿತು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಕಬ್ಬಿಗಿಂತಲೂ ಭತ್ತದ ಬೆಳೆಗೆ ನೀರು ಜಾಸ್ತಿ ಬೇಕಾಗಿಲ್ಲ ಅನ್ನುವುದು ತಮಗೆ ಗೊತ್ತಿಲ್ಲವೇ?

Mr. SPEAKER.—That question does not arise.

Onions, Potatoes, Chillies and Jaggery (Production and Consumption in the State).

Q.—71. **Sri G. NARAYANA GOWDA** (Mulbagal-Srinivasapur).—

Will the Government be pleased to state :—

(*a*) whether they are in possession of statistics regarding production and consumption of onions, potatoes, chillies and jaggery in the State ;

(*b*) if so, the quantity of the said articles recommended to the Central Government for exportation ?

A.—**Dr. R. NAGAN GOWDA** (Minister for Agriculture).—

(*a*) Yes.

(*b*) A recommendation has been made to the Government of India, to issue export permits for potatoes after reserving a total quantity of 2,50,000 railway maunds required for seed purposes and local consumption. In the case of onions, etc., no recommendation has been made.

ಶ್ರೀ ಜಿ. ನಾರಾಯಣಗೌಡ.—ನಮ್ಮ ಸಂಸ್ಥಾನದಲ್ಲಿ ಈರುಳ್ಳಿ, ಆಲೂಗಡ್ಡೆ, ಮೆಣಸಿನಕಾಯಿ ಮತ್ತು ಬೆಲ್ಲ ಇವುಗಳು ವರ್ಷಕ್ಕೆ ಎಷ್ಟೆಷ್ಟು ಉತ್ಪತ್ತಿಯಾಗುತ್ತಿವೆ, ನಮಗೆ ಈ ಸಾಮಾನುಗಳು ವರ್ಷಕ್ಕೆ ಎಷ್ಟೆಷ್ಟು ಬೇಕಾಗುತ್ತವೆ?

*ಡಾ॥ ಆರ್. ನಾಗನಗೌಡ.—ಈಗ ನನ್ನಲ್ಲಿ ಈ ವರ್ಷದ ಅಂಕಿಅಂಶಗಳಿಲ್ಲ. ಕಳೆದ ವರ್ಷದ ಅಂಕಿ ಅಂಶಗಳಿವೆ. ನಮ್ಮ ಸಂಸ್ಥಾನದಲ್ಲಿ 11 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಆಲೂಗಡ್ಡೆಯನ್ನು ಬೆಳೆಯಲಾಗುತ್ತಿದೆ. ಕಬ್ಬನ್ನು 56,255 ಎಕರೆಗಳಲ್ಲಿ ಬೆಳೆ ಮಾಡಲಾಗುತ್ತಿದೆ. 85 ಸಾವಿರ ಎಕರೆಗಳಲ್ಲಿ ಮೆಣಸಿನ ಕಾಯಿಯನ್ನು ಬೆಳೆಯಲಾಗುತ್ತಿದೆ. 17 ಸಾವಿರ ಎಕರೆಗಳಲ್ಲಿ ಈರುಳ್ಳಿಯನ್ನು ಬೆಳೆಯುತ್ತಿದ್ದಾರೆ.

ಶ್ರೀ ಜಿ. ನಾರಾಯಣಗೌಡ.—ಈಗ ನಮ್ಮ ಸಂಸ್ಥಾನದಲ್ಲಿ ಈ ಪ್ರತಿಯೊಂದು ಸಾಮಾನನ್ನೂ ಎಷ್ಟೆಷ್ಟು ಉಪಯೋಗಿಸಲಾಗುತ್ತಿದೆ? ಮತ್ತು ಹೊರಗಡೆಗೆ ಎಷ್ಟನ್ನು ರಫ್ತು ಮಾಡಲಾಗುತ್ತಿದೆ?

ಡಾ॥ ಆರ್. ನಾಗನಗೌಡ.—ಈಗ ಬೆಂಗಳೂರು ಜಿಲ್ಲೆಯಲ್ಲಿ ಸುಮಾರು 9 ಸಾವಿರ ಟ್ಯಾ ಆಲೂಗಡ್ಡೆ ಉತ್ಪನ್ನವಾಗುತ್ತಿದೆ. ಇದರ ಪೈಕಿ ನಮಗೆ ಇಲ್ಲಿನ ಬಳಕೆಗೆ ಮತ್ತು ಬೀಜಕ್ಕಾಗಿ ಆವರೇಜಿನಲ್ಲಿ ನಾವು 4,500 ಟ್ಯಾಗಳನ್ನು ಸಂಸ್ಥಾನದ ಬೆಳೆಗೆ ಇಟ್ಟುಕೊಳ್ಳುತ್ತಿದ್ದೇವೆ. ಕಬ್ಬನ್ನು 56 ಸಾವಿರ ಚಿಲ್ಲರೆ ಎಕರೆಗಳಲ್ಲಿ ಬೆಳೆಸಲಾಗುತ್ತಿದೆ. ಈ ಪೈಕಿ 8½ ಸಾವಿರ ಚಿಲ್ಲರೆ ಎಕರೆಗಳಲ್ಲಿ ಬೆಳೆಯತಕ್ಕಂಥ ಕಬ್ಬನ್ನು ಸಕ್ಕರೆ ಕಂಪೆನಿಗೆ ಕೊಡಲಾಗುತ್ತಿದೆ ಉಳಿದ ಕಬ್ಬನ್ನೆಲ್ಲಾ ಬೆಲ್ಲದ ತಯಾರಿಗಾಗಿ ಉಪಯೋಗಿಸುತ್ತಿದ್ದಾರೆ. ಇನ್ನು ನಮ್ಮಲ್ಲಿ 7 ಸಾವಿರ ಟ್ಯಾ ಮೆಣಸಿನಕಾಯಿ ಮತ್ತು 7 ಸಾವಿರ ಟ್ಯಾ ಈರುಳ್ಳಿ ಉತ್ಪತ್ತಿಯಾಗುತ್ತಿದೆ.

ಶ್ರೀ ಜಿ. ನಾರಾಯಣಗೌಡ.—ಆ ಪೈಕಿ ನಮ್ಮ ಸಂಸ್ಥಾನಕ್ಕಾಗಿ ಉಳಿಯುವುದೆಷ್ಟು?

ಅಧ್ಯಕ್ಷರು.—ಆ ಅಂಕಿಅಂಶಗಳೆಲ್ಲಾ ಹಾಲಿ ಇಲ್ಲ ಎಂದು ಹೇಳುತ್ತಿದ್ದಾರೆ.

ಡಾ॥ ಆರ್. ನಾಗನಗೌಡ.—ನಾವು ಪೂರ್ವದಲ್ಲಿ ರಫ್ತು ಮಾಡುತ್ತಿದ್ದಂಥ ಅಂಕಿಅಂಶಗಳಿಲ್ಲ. ಈಗೇನೋ 20 ಸಾವಿರ ಟ್ಯಾ ತನಕ ರಫ್ತು ಮಾಡುತ್ತಿದ್ದೇವೆ. ನಮಗೆ ಬೀಜಕ್ಕೆ ಮತ್ತು ಇಲ್ಲಿನ ಬಳಕೆಗೆ ಬೇಕಾಗತಕ್ಕದನ್ನು ಇಟ್ಟುಕೊಂಡು ಬಾಕಿಯದನ್ನು ಹೊರಗಡೆಗೆ ರವಾನೆ ಮಾಡಲು ಅವಕಾಶ ಕೊಟ್ಟಿದ್ದೇವೆ. ನಮಗೆ ಈಗ ವರ್ಷಕ್ಕೆ ಆಗತಕ್ಕಷ್ಟನ್ನು ಬಳಸಿಕೊಂಡು ನುಮಾರು 9 ಸಾವಿರ ರೈಲ್ವೆ ಟ್ಯಾಗಳಷ್ಟು ಬೆಲ್ಲ, 5 ಸಾವಿರ ಟ್ಯಾಗಳಷ್ಟು ಈರುಳ್ಳಿ ಮತ್ತು 1,500 ಟ್ಯಾಗಳಷ್ಟು ಮೆಣಸಿನಕಾಯಿಯನ್ನು ಹೊರಗಡೆಗೆ ರಫ್ತು ಮಾಡಲು ಅವಕಾಶ ಕೊಟ್ಟಿದ್ದೇವೆ. Those figures will be taken as giving an idea of the quantities that are available for export.

ಶ್ರೀ ಜಿ. ನಾರಾಯಣಗೌಡ.—ಈಗ ಈರುಳ್ಳಿ, ಮೆಣಸಿನಕಾಯಿ, ಬೆಲ್ಲ ಇತ್ಯಾದಿ ಸಾಮಾನುಗಳನ್ನು ನಮ್ಮ ದೇಶದ ಉಪಯೋಗಕ್ಕೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡು ಹೆಚ್ಚಿಗೆ ಉಳಿಯತಕ್ಕಂಥ ವಸ್ತುಗಳನ್ನು ಹೊರಗಡೆಗೆ ಕಳುಹಿಸಿ ಕೊಡತಕ್ಕ ಬಗ್ಗೆ ಯಾರಾದರೂ ತಮ್ಮಲ್ಲಿಗೆ ಬಂದು ಸಹಾಯ ಮಾಡ ಬೇಕೆಂದು ಕೇಳಿಕೊಂಡರೆ ಅವರಿಗೆ ತಾವು ಸಹಾಯ ಮಾಡುತ್ತಿರಾ?

ಡಾ॥ ಆರ್. ನಾಗನಗೌಡ.—ಈಗಾಗಲೇ ಇಂಡಿಯಾ ಸರ್ಕಾರದವರು ಈ ಬೆಲ್ಲದ ರಫ್ತು ಬಗ್ಗೆ ಒಂದು ಪ್ರೆಸ್ ಕಮ್ಯುನಿಕೇಷನ್ನನ್ನೇ ಹೊರಡಿಸಿದ್ದಾರೆ. ಮದ್ರಾಸ್ಸಿನಲ್ಲಿ ಈಬಗ್ಗೆ ಲೈಸೆನ್ಸ್ ಕೊಡತಕ್ಕಂಥ ಒಬ್ಬ ಅಧಿಕಾರಿಗೆಳಿದ್ದಾರೆ. There is an export officer in Madras. One could apply to him and get permit. There is no restriction on export of jaggery and so one could apply to him to get the permit for that. So far as onions are concerned, the Government of India has asked for certain information regarding the quantites we have for export. ನಾವು ಈವರ್ಷ ನಮ್ಮ ಸಂಸ್ಥಾನದಿಂದ ಹೊರಗಡೆಗೆ 2,160 ಟ್ಯಾಗಳನ್ನು ಕಳುಹಿಸಲು ಅವಕಾಶವಿದೆಯೆಂದು ಅವರಿಗೆ ತಿಳಿಸಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಈಗ ತಾವು ನಮ್ಮ ದೇಶದಲ್ಲಿರತಕ್ಕಂಥ ಜನರನ್ನು ಬಿಟ್ಟು ಹೊರಗಡೆ ಬಂಗಾಳ ಮತ್ತು ಕಲ್ಕತ್ತಾದವರಿಗೆ ಈ ಸಾಮಾನುಗಳನ್ನು ರಫ್ತು ಮಾಡಲು ಅವಕಾಶ ಕೊಟ್ಟಿರತಕ್ಕದ್ದು ತಪ್ಪಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಈ trade channels ಎಲ್ಲವನ್ನೂ ನಾವು ಈಗಾಗಲೇ ಫಿಕ್ಸ್